ವಿಚಾರಿಸಿದಾಗ ಹುಡುಗಿ ಅತ್ತುಕೊಳ್ಳುತ್ತಾ ಎಲ್ಲವನ್ನು ಹೇಳಿಕೊಂಡಳು. ತಾನು ತನ್ನ ಗಂಡ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿರುವುದಾಗಿಯೂ, ಮ್ಯೂಚುಯಲ್ ಕನ್ಸೆಂಟ್ ಆದ್ದರಿಂದ ಡೈವೋರ್ಸ್ ಸಿಗುವುದು ಸುಲಭ. ಇನ್ನೇನು ಸಿಗುತ್ತೆ ಅಂದಳು. 'ಮತ್ತೆ ಮಗು?' ಅಂದಾಗ ಮುಳಮುಳನೆ ಅಳುತ್ತಾ, 'ಗೊತ್ತಿಲ್ಲ ದೊಡ್ಡಮ್ಮ, ಈ ಮಗುವನ್ನು ಏನು ಮಾಡಬೇಕಂತ? ಅವನಿಗೂ ಬೇಕಿಲ್ಲ, ನಂಗೂ ಬೇಡವಾಗಿದೆ. ನಾನಿನ್ನೂ ಬ್ರೇಕಪ್‌ನಿಂದ ಸುಧಾರಿಸಿಕೊಳ್ಳಬೇಕಿದೆ. ನಾನು ಸಾಕೋಣ ಅಂದರೆ ತುಂಬ ಕಷ್ಟ. ಅಮ್ಮ ಮಾತ್ರ ಮಗುವನ್ನು ಸಾಕೋಣ ಅಂತಾಳೆ. ನಂಗೇ ಧೈರ್ಯವಿಲ್ಲ, ಬೇಡ ಅಂದುಬಿಟ್ಟೆ. ನಾಳೆ ನಾನು ಇನ್ಯಾವುದಾದರೂ ರಿಲೇಶನ್‌ಶಿಪ್‌ನಲ್ಲಿ ಇರಬೇಕಾದರೆ ಇದು ನನಗೆ ತೊಡಕಾಗುತ್ತೆ. ವಿ ಶುಡ್ ಬಿ ವೆರಿ ಪ್ರಾಕ್ಟಿಕಲ್ ಅಲ್ಲವ?' ಎಂದಳು. ಇವರಿಗೆಲ್ಲ ಏನಾಗಿದೆ ಅಂದುಕೊಂಡಳು ಸುನಂದೆ. 'ಏನು ಮಾತಾಡ್ತೀಯ ನೀನು? ತಾಯಿಗೆ ಮಗು ಭಾರವೆ? ಹೇಗಾದರೂ ಆಗುತ್ತೆ. ದೇವರು ಬೇಕಾದಷ್ಟು ಕೊಟ್ಟಿದ್ದಾನೆ. ಹೇಗೋ ನೋಡಿಕೊಂಡರಾಯಿತು' ಅಂದಳು. 'ಇಲ್ಲ, ಅದಷ್ಟು ಸುಲಭವಲ್ಲ, ಮಗು ಸಾಕಕ್ಕೆ ಮೆಂಟಲಿ ಪ್ರಿಪೇರ್ ಆಗಿಲ್ಲ ನಾನು' ಅಂದಳು. 'ಹಾಗಾದರೆ ಯಾಕೆ ಮಗು ಮಾಡಿಕೊಂಡೆ?' ಅಂದಾಗ 'ಆಗ ಇಬ್ಬರೂ ಬ್ರೇಕಪ್ ಕುರಿತು ಯೋಚಿಸಿರಲಿಲ್ಲ' ಎಂದಳು. ಅವಳ ತಾಯಿಯ ಬಳಿ ಮಾತಾಡಿದಾಗ ಅವಳೂ ಹಲುಬುತ್ತಾ, 'ಸಾಕಾಗಿದೆ ಸುನಂದಕ್ಕ... ಈ ಮಕ್ಕಳ ಯೋಚನೆಯೇ ಬೇರೆ ರೀತಿ. ಇವರಿಗೆಲ್ಲ ಮದುವೆ ಮಾಡ್ಕೋ, ಮಕ್ಕಳು ಮಾಡ್ಕೋ ಅಂತ ನಾವು ಒತ್ತಾಯಾನೆ ಮಾಡಬಾರದು. ಮದುವೆಯಾಗಲೊಂದು ಫಸ್, ಮಕ್ಕಳು ಮಾಡಿಕೊಳ್ಳಲು ಇನ್ನೊಂಥರ. ಮಕ್ಕಳಾದ ಮೇಲೂ ಜೊತೆಗಿರ್ತಾರೆ ಅಂತ ಖಾತ್ರಿಯಿಲ್ಲ. ಒಳ್ಳೆ ಕೆಲಸ, ಓದು, ಸಂಬಳ ಇರುತ್ತೆ... ಮದ್ವೆ ಮಾಡ್ಕೊಳಕ್ಕೆ ಯೋಚ್ನೆ ಮಾಡ್ತಾರೆ. ಇಬ್ಬರೂ ಸಂಪಾದಿಸ್ತಾರೆ. ಮನೆ, ಕಾರು ತಗೊಳ್ತಾರೆ, ಮಕ್ಕಳು ಮಾಡಿಕೊಳ್ಳಕ್ಕೆ ಚಿಂತೆ ಮಾಡ್ತಾರೆ. ಮಕ್ಕಳಾಯ್ತು ಅನ್ನಿ... ಜೊತೇಲಿರಕ್ಕೆ ಏನಾದ್ರು ತಕರಾರು. ಇಂಥದ್ದೇ ಕಾರಣ ಅಂತಲ್ಲ... ದುಡ್ಡು, ಕಾಸು, ಆಸ್ತಿ, ಮನೆ, ಕಾರು... ಏನೂ ಇಲ್ಲದೆ ಮದುವೆ, ಮನೆ, ಮಕ್ಕಳು ಮಾಡಿಕೊಂಡು ನಿರಾಳವಾಗಿ ಬದುಕುತ್ತಾ ಇದ್ವಿ. ನಾವು ಹಾಗೆ ಹೇಳಿದ್ರೆ ಏನಂತಾರೆ ಗೊತ್ತ ಅಕ್ಕ? 'ನೀವಿದ್ದ ಚೆಂದ ನಾವು ನೋಡಿಲ್ವ? ಸದಾ ಹೊಡೆದಾಡಿ ಕಡಿದು ಬಿದ್ದು ಅತ್ತೂ ಕರೆದೂ... ಅಂತೂ ಜೊತೇಲಿರ್ತಿದ್ರಿ ಅಷ್ಟೆ! ಅಂಥ ಬೂಟಾಟಿಕೆ ನಾವು ಮಾಡಲ್ಲಪ್ಪ, ಇಷ್ಟವಿದ್ರೆ ಜೊತೆಗಿರ್ತೀವಿ, ನಮಗೇ ಕಿರಿಕಿರಿ ಆದ್ರೆ ಬಿಟ್ಟೆಸೀತೀವಿ. ಅಷ್ಟೇ ನಮಗೂ ನಿಮಗೂ ಇರೋ ಡಿಫರೆನ್ಸು' ಅಂತಾರೆ. ಈ ಮಗೂನ ಏನು ಮಾಡಲಿ ಅಂತ ಯೋಚನೆ ಆಗೋಗಿದೆ ನಂಗೆ. ಮುಂಬೈ ಮನೇಲಿ ಸೊಸೆಯ ದರಬಾರು, ಅವಳು ಹೇಳಿದ್ದೇ ನಡೆಯಬೇಕು. ಅವಳ ಎಡೇಲಿ ಅಲ್ಲಿ ಬಾಣಂತನಕ್ಕೂ ಸ್ವಾತಂತ್ರ್ಯವಿಲ್ಲ ಅಂತಾನೆ ಇಲ್ಲಿ ಬಂದೆ. ಈ ಮಗೂನ ಮೂರು ತಿಂಗಳಾದ ಮೇಲೆ ಬಾಪೂಜಿ ಚಿಲ್ಡ್ರನ್ಸ್ ಹೋಮಿಗೆ ಬಿಟ್ಟು ಬಿಡೋಣ ಅಂತ ಹೇಳ್ತಿದ್ದಾಳೆ. ಯಾರೂ ಕಾಣದಂಗೆ ಬೆಳಗ್ಗಿಯೇ ಹೋಗಿ ಗೇಟಿನ ಮುಂದೆ ಅಲ್ಲಿಟ್ಟಿರುವ ತೊಟ್ಟಿಲಲ್ಲಿ ಇಟ್ಟು ಬರೋಣ ಅಂತ ಹಟ ಹಿಡೀತಿದ್ದಾಳೆ' ಅಂತ ಅತ್ತಳು. ಎದೆ ಝಲ್ ಅಂತು ಸುನಂದೆಗೆ.

ಸುಖಪ್ರಸವ ಆಗಿ ದುಂಡು ದುಂಡಾಗಿ ಆರೋಗ್ಯದಿಂದ ಹುಟ್ಟಿದ ಹೆಣ್ಣು ಮಗುವನ್ನು ಮನೆಗೆ ಕರೆತಂದು ಆರೈಕೆಯಲ್ಲಿ ತೊಡಗಿಕೊಂಡರು ಇಬ್ಬರು ಅಜ್ಜಿಯರು. ಮೂರು ತಿಂಗಳಾಗುವಷ್ಟರಲ್ಲಿ ಮಗುವನ್ನು ಮೇಲು ಹಾಲಿಗೆ ಒಗ್ಗಿಸಿದಳು ಸುನಂದೆ. ವಿನತೆ ತನ್ನ ಸ್ವಾಸ್ಥ್ಯ, ಆರೋಗ್ಯ, ಸೌಷ್ಠವಗಳತ್ತ ಗಮನ ಹರಿಸುತ್ತಾ ಯೋಗ, ವ್ಯಾಯಾಮಗಳತ್ತ ಮನಸ್ಸು ಮಾಡಿದಳು. ಮಗುವನ್ನು ಮೀಯಿಸಿ, ಉಣಿಸಿ, ಉಡಿಸಿ ತೊಡಿಸಿ ತನ್ನ ಮಡಿಲಿಗೆ ರವಾನಿಸಿಕೊಂಡಳು ಸುನಂದೆ. ಮೂರು ತಿಂಗಳಾಗುವಷ್ಟರಲ್ಲಿ ವಿನತೆ ಚೆನ್ನಾಗಿಯೇ ಚೇತರಿಸಿಕೊಂಡಳು. ತಾವಿನ್ನು ಮುಂಬೈಗೆ ಹೊರಡುತ್ತೇವೆ ಎಂದು ಹೇಳಿದಾಗ, ಅವಳನ್ನು ಅನುನಯಿಸುವವಳಂತೆ, 'ನಿಜ ಹೇಳು ವಿನೂ, ಈ ಮಗೂನ ಏನು ಮಾಡ್ತೀಯ ಅಂತ'